ಅಸಲು ದಾವೆ ನಂ.ಃ178/2015
ಪಿಡಬ್ಲ್ಯೂ - 1

ದಿನಾಂಕ 22-04-2019 ರಂದು ಪುನಃ ಸಾಕ್ಷಿಗೆ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಜೆ.ವಿ.ಹೆಚ್ ವಕೀಲರಿಂದ.**

ನನ್ನ ತಂದೆಗೆ ಸೈಯದ್ ಪಟೇಲ್ ಮತ್ತು ಮಷಾಕ್ ಪಟೇಲ್ ಸಹೋದರರಾಗಬೇಕು. ಸೈಯದ್ ಪಟೇಲ್‌ನಿಗೆ ಶಬ್ಬಿರ ಪಟೇಲ್ ಮತ್ತು ಬಷಿರ್ ಪಟೇಲ್ ಎನ್ನುವ ಮಕ್ಕಳಿದ್ದಾರೆ. ಮಷಾಕ್ ಪಟೇಲ್‌ಗೆ ರಾಜಾ ಪಟೇಲ್ ಮತ್ತು ಸಾಹೇಬ ಪಟೇಲ್ ಎನ್ನುವ ಮಕ್ಕಳಿದ್ದಾರೆ. ನಮ್ಮ ತಂದೆಯ ತಂದೆಯ ಹೆಸರು ಖಾಸಿಂ ಪಟೇಲ್. ದಾವಾ ಆಸ್ತಿಯನ್ನು ಹೊರತುಪಡಿಸಿ ನಮ್ಮ ಮುತ್ಯನಿಗೆ ಬೇರೆ ಯಾವುದೇ ಜಮೀನುಗಳಿಲ್ಲ. ನನ್ನ ತಂದೆ ಜೀವಂತ ಇದ್ದಾಗ ಅಂದರೆ ಸುಮಾರು 40 ರಿಂದ 50 ವರ್ಷಗಳ ಹಿಂದೆ ನನ್ನ ತಂದೆ ಮತ್ತು ಆತನ ಸಹೋದರರು ಪಾಲು ವಿಭಜನೆ ಮಾಡಿಕೊಂಡಿದ್ದಾರೆ. ಸದರಿ ಪಾಲು ವಿಭಜನೆಯಾದ ನಂತರ ನನ್ನ ತಂದೆ ಮತ್ತು ಆತನ ಸಹೋದರರ ಹೆಸರುಗಳು ಪಹಣಿ ಪತ್ರಿಕೆಯಲ್ಲಿ ನಮೂದಾಗಿರುತ್ತವೆ ಮತ್ತು ಅವರು ತಮ್ಮ ಪಾಲಿಗೆ ಬಂದ ಜಮೀನಿನ ಸ್ವಾಧೀನತೆಯಲ್ಲಿದ್ದರು ಎಂದರೆ ಸರಿ. ನಮ್ಮ ತಂದೆ ಬರಗಾಲ ಅಂದರೆ 1970 ನೇ ಇಸವಿಯಲ್ಲಿ ತೀರಿಕೊಂಡಿದ್ದಾರೆ. ದಾವಾ ಆಸ್ತಿಯು ಈಗ ನನ್ನ ಹೆಸರಿನಲ್ಲಿ ಇದೆ. ದಾವಾ ಆಸ್ತಿಯು ಈ ವರ್ಷ ಪ್ರತಿವಾದಿಯರ ಸ್ವಾಧೀನತೆಯಲ್ಲಿದೆ. ದಾವಾ ಆಸ್ತಿಯನ್ನು ಕಳೆದ 30 ವರ್ಷಗಳಿಂದ ಪ್ರತಿವಾದಿಯರು ಬಿತ್ತುವುದು ಬೆಳೆಯುವುದು ಮಾಡುತ್ತಾರೆ. ನಾನು 30

ವರ್ಷಗಳಿಂದ ಪ್ರತಿವಾದಿಯರ ವಿರುದ್ಧ ಯಾವುದೇ ಕಾನೂನು ಕ್ರಮ ಜರುಗಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಸ್ವಾಧೀನತೆ ಕೋರಿ ನಾನು ದಾವೆ ಸಲ್ಲಿಸಿದ್ದೇನೆ. ಪ್ರತಿವಾದಿಯರ ಹೆಸರು ಪಹಣಿಯಲ್ಲಿ ನಮೂದಾದ ನಂತರ ಸದರಿ ಪಹಣಿ ಪತ್ರಿಕೆಯ ಎಂಟ್ರಿಯ ರದ್ದುಕೋರಿ ನಾನು ಎಲ್ಲಿಯೂ ಕೂಡ ಅಪೀಲು ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಮಶಾಕ್ ಪಟೇಲ್‌ರವರ ಮಕ್ಕಳಾದ ಪ್ರತಿವಾದಿಯರ ಪಾಲಿಗೆ ಬಂದಿದೆ ಎಂದು ನಾವು ಮುಟೇಶನ್ ಮಾಡಿಕೊಟ್ಟಿದ್ದೇವೆ ಎಂದರೆ ಸರಿ ಅಲ್ಲ. ಸದರಿ ಮುಟೇಶನ್ ಮಾಡಲು ಹಣ ಪಡೆದುಕೊಂಡು ದಿನಾಂಕ 05-05-1983 ರಂದು ನಾವು ಒಂದು ರಶೀದಿ ಬರೆದುಕೊಟ್ಟಿದ್ದೇವೆ ಎಂದರೆ ಸರಿ ಅಲ್ಲ. ನಾನು ಒಪ್ಪಿಕೊಂಡು ದಿನಾಂಕ 05-05-1983 ರ ರಶೀದಿಯ ಮೇಲೆ ಸಹಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ಸದರಿ ರಶೀದಿಯನ್ನು ಬಣಮಿ ಗ್ರಾಮದ ಶರಣಗೌಡ ಪಾಟೀಲ್ ಎನ್ನುವವರು ಬರೆದಿದ್ದಾರೆ ಎಂದರೆ ಸರಿ ಅಲ್ಲ. ನಾನು ಮತ್ತು ಸಾಕ್ಷಿದಾರರು ಸದರಿ ರಶೀದಿಯ ಮೇಲೆ ಸಹಿ ಮಾಡಿದ್ದೇವೆ ಎಂದರೆ ಸರಿ ಅಲ್ಲ.

ನಮ್ಮ ಕುಟುಂಬಕ್ಕೆ ಚಿತ್ತಾಪೂರ ತಾಲೂಕಿನ ಕುನ್ನೂರು ಗ್ರಾಮದಲ್ಲಿ ಜಮೀನುಗಳಿದ್ದವು ಆ ಜಮೀನುಗಳು ನಮ್ಮ ಕಾಕ ಇವರಿಗೆ ಕೊಟ್ಟಿದ್ದೇವೆ.

ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ